(ಇಂದು ದಿನಾಂಕ 24.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-**

ಸರ್ವೆ ನಂಬರ್ 102/2 ಕ್ಕೆ ಸಂಬಂಧಿಸಿದಂತೆ ಈ ದಾವೆಯನ್ನು ಹೂಡಿದ್ದೇನೆ. ಸರ್ವೆ ನಂಬರ್ 102/2 ರಲ್ಲಿ 2 ಎಕರೆ 4 ½ ಗುಂಟೆ ಜಮೀನು ಇದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನಾನು ಆ ರೀತಿ ಹೇಳಿಲ್ಲ, ನಮ್ಮದು 2 ಎಕರೆ 4 ಗುಂಟೆ ಎನ್ನುತ್ತಾರೆ. ಮೂಲದಿಂದಲೂ ಸರ್ವೆ ನಂಬರ್ 102/2 ರ ಪೂರ್ತಿ ವಿಸ್ತೀರ್ಣ 2 ಎಕರೆ 12 ಗುಂಟೆ ಎಂದರೆ ಸಾಕ್ಷಿ 2 ಎಕರೆ 4 ½ ಗುಂಟೆ ಎನ್ನುತ್ತಾರೆ. ಭೂ ನ್ಯಾಯ ಮಂಡಳಿಯಿಂದ ದೊಡ್ಡಹನುವಯಿಯ್ಯ ಎನ್ನವವರಿಗೆ ಸರ್ವೆ ನಂಬರ್ 94 ರಲ್ಲಿ 1 ಎಕರೆ ಸರ್ವೆ ನಂಬರ್ 102/2 ರಲ್ಲಿ 26 ಗುಂಟೆ ಮಂಜೂರಾಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಭೂ ನ್ಯಾಯ ಮಂಡಳಿಯಿಂದ ಮಂಜೂರಾದ ನಂತರ ದೊಡ್ಡಹನುಮಯ್ಯನವರ ಹೆಸರಿಗೆ ಕಂದಾಯ ದಾಖಲೆಗಳು ಬರುತ್ತಿತ್ತು ಎಂದರೆ ಸರಿ. ದೊಡ್ಡಹನುಮಯ್ಯ ಮೃತಪಟ್ಟ ನಂತರ ಅವರ ಮಕ್ಕಳಿಗೆ ಅವರಿಗೆ ಮಂಜೂರಾದ ಜಮೀನಿನ ಕಂದಾಯ ದಾಖಲೆಗಳು ಅವರ ಮಕ್ಕಳ ಹೆಸರಿಗೆ ಆಗಿವೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ದೊಡ್ಡಹನುಮಯ್ಯನ ಮಗ ತನ್ನ ಹೆಸರಿಗೆ ಕಂದಾಯ ದಾಖಲೆಗಳನ್ನು ವರ್ಗಾಯಿಸಿಕೊಳ್ಳುವಾಗ ಸರ್ವೆ ನಂಬರ್ 102/2 ಪೋಡಿಯಾಗಿ 102/3 ಆಗಿದೆ ಎಂದರೆ ಸಾಕ್ಷಿ ಬೋರವೆಲ್ ಕೊರೆಯುವಾಗ ಮಾಡಿಸಿಕೊಂಡಿದ್ದಾರೆ. ಪೋಡಿಯಾಗುವಾಗ ನನ್ನ ಹೆಸರಿಗೆ 1 ಎಕರೆ 26 ಗುಂಟೆ ಆಗಿದೆ ಎಂದರೆ ಸಾಕ್ಷಿ ನನಗೆ 2 ಎಕರೆ 4 ½ ಗುಂಟೆ ಪತ್ರವಾಗಿದೆ ಎನ್ನುತ್ತಾರೆ. ದಿನಾಂಕ 01.03.2007 ರಲ್ಲಿ ದೊಡ್ಡಹನುಮಯ್ಯ ಹಾಗೂ ಅವರ ಮಕ್ಕಳು ಸೇರಿ ಅವರ 26 ಗುಂಟೆ ಜಮೀನಿಗೆ ಕುರಿತಂತೆ 6 ನೇ ಪ್ರತಿವಾದಿಗೆ ಕ್ರಯದ ಕರಾರು ಮಾಡಿದ್ದಾರೆ ಎಂದರೆ ಸರಿ. ಕರಾರಿನಲ್ಲಿ ಇರುವ ಸ್ವತ್ತು ಹಾಗೂ ದಾವಾ ಎ ಅನುಸೂಚಿ ಸ್ವತ್ತು ಬೇರೆ ಬೇರೆ ಎಂದರೆ ಸರಿ. ದೊಡ್ಡಹನುಮಯ್ಯನ ಮಕ್ಕಳು 26 ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಭೂ ನ್ಯಾಯ ಮಂಡಳಿಯಲ್ಲಿ ಮಾಡಿದ ಆದೇಶವನ್ನು ಈವರೆಗೂ ನಾವು ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. 26 ಗುಂಟೆಯಲ್ಲಿ ಬೋರವೆಲ್ ಯಾಕೆ ಕೋರೆದಿದ್ದೀರಾ ಎಂದು ನಾನು ಪ್ರಶ್ನಿಸಿರುವುದಿಲ್ಲ. 102/2 ರಲ್ಲಿ 1 ಎಕರೆ 26 ಗುಂಟೆ ಮಾತ್ರ ಇರುವುದು 2 ಎಕರೆ 4 ½ ಗುಂಟೆ ಇಲ್ಲ ಎಂದರೆ ಸರಿಯಲ್ಲ. ನಾವು 1 ಎಕರೆ 26 ಗುಂಟೆಗೆ ಮಾತ್ರ ಮಾಲೀಕರು ಮಾತ್ರ 2 ಎಕರೆ 4 ½ ಗುಂಟೆಗೆ ಅಲ್ಲ ಎಂದರೆ ಸರಿಯಲ್ಲ. ಪೋಡಿ ಮಾಡುವ ವಿಷಯ ನಮಗೆ ಗೊತ್ತಿದೆ.

**ಮರುವಿಚಾರಣೆ:- ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓದಿ ಹೇಳಿ ಕೇಳಿ ಸರಿ ಇದೆ.

2 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ,
ಆನೇಕಲ್.